# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **808** |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಎಂ ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವವರು | : | ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 09.03.2021 |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕೊರೋನದಿಂದ ಅತಂತ್ರವಾಗಿರುವ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಯಾವುದಾದರೂ ಹೊಸ ಯೋಜನೆ ರೂಪುಗೊಂಡಿದೆಯೇ; ಹಾಗಿದ್ದಲ್ಲಿ ಯೋಜನೆಯ ಸಂಪೂರ್ಣ ಮಾಹಿತಿ ನೀಡುವುದು; | ಕೊರೋನದಿಂದ ಸಂಕಷ್ಟದಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಈ ಕೆಳಗಿನ ಯೋಜನೆ/ಸೌಲಭ್ಯಗಳನ್ನು ಒದಗಿಸಲಾಗುತ್ತದೆ:-<br><br>1. ಕೇಂದ್ರ ಸರ್ಕಾರ ಘೋಷಿಸಿರುವ **"ಆತ್ಮ ನಿರ್ಭರ ಭಾರತ ಅಭಿಯಾನ"** ದ ಅಡಿಯಲ್ಲಿ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಮತ್ತು ಉದ್ಯಮಗಳಿಗೆ ಆರ್ಥಿಕ ನೆರವು ನೀಡುವ ಈ ಯೋಜನೆಯನ್ನು ಜಾರಿಗೆ ತಂದಿರುತ್ತದೆ<br>2. ಭಾರತ ಸರ್ಕಾರವು **"ಇ.ಸಿ.ಎಲ್.ಜಿ"-ಎಮರ್ಜೆನ್ಸಿ ಕ್ರೆಡಿಟ್ ಲೈನ್ ಗ್ಯಾರಂಟಿ** ಯೋಜನೆಯನ್ನು ಜಾರಿಗೆ ತಂದಿದ್ದು, ಇದರನ್ವಯ ಫೆಬ್ರವರಿ-2020ರ ಅಂತ್ಯಕ್ಕೆ ಬ್ಯಾಂಕ್‌ಗಳಲ್ಲಿ ಬಾಕಿ ಇರುವ ಎಂ.ಎಸ್.ಎಂ.ಇ ಘಟಕಗಳ ಸಾಲದ ಮೊತ್ತಕ್ಕೆ ಶೇ.20 ರಷ್ಟು ಹೆಚ್ಚುವರಿ ಸಾಲವನ್ನು ಯಾವುದೇ ಹೆಚ್ಚುವರಿ ಖಾತರಿ ಇಲ್ಲದೇ ನೀಡುವ ಯೋಜನೆಯನ್ನು ಜಾರಿಗೆ ತಂದಿರುತ್ತದೆ.<br>3. ಇಂಧನ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಏಪ್ರಿಲ್ ಮತ್ತು ಮೇ 2020 ತಿಂಗಳುಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ.<br>4. ಇಂಧನ ಇಲಾಖೆಯು ವಿದ್ಯುತ್ ಬಿಲ್ ಅನ್ನು ಪ್ರಾಮಾಣಿಕವಾಗಿ ನಿಗದಿತ ಅವಧಿಯೊಳಗೆ ಪಾವತಿಸುವ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ನೀಡಿರುತ್ತದೆ. ಹೆಚ್‌ಟಿ ಗರಿಷ್ಟ ಮಿತಿ ರೂ.1 ಲಕ್ಷ, ಎಲ್‌ಟಿ ಗರಿಷ್ಟ ಮಿತಿ ರೂ.10,000/-<br><br>1 ರಿಂದ 5 ದಿನದೊಳಗೆ ಪಾವತಿಸಿದಲ್ಲಿ — ಶೇ.1 ರಿಯಾಯಿತಿ<br>6 ರಿಂದ 15 ದಿನದೊಳಗೆ ಪಾವತಿಸಿದಲ್ಲಿ — ಶೇ.0.5% ರಿಯಾಯಿತಿ<br>15 ರಿಂದ 30 ದಿನದೊಳಗೆ ಪಾವತಿಸಿದಲ್ಲಿ — ಯಾವುದೇ ರಿಯಾಯಿತಿ ಇರುವುದಿಲ್ಲ |

| | | |
|---|---|---|
| | | 5. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು ಮಾರ್ಚ್, ಏಪ್ರಿಲ್ ಮತ್ತು ಮೇ 2020 ತಿಂಗಳಲ್ಲಿ ಪಾವತಿಸದಿದ್ದಲ್ಲಿ ಆ ಪಾವತಿಯನ್ನು ಕ್ರಮವಾಗಿ 3 ತಿಂಗಳು ಮುಂದೂಡಲಾಗಿದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸುವುದಿಲ್ಲ.<br><br>6. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು, ಮಳಿಗೆಗಳ ಬಾಡಿಗೆ ಮತ್ತು ನೀರಿನ ಶುಲ್ಕಗಳ 2020 ರ ಏಪ್ರಿಲ್ ಮತ್ತು ಮೇ ತಿಂಗಳುಗಳ ಕಂತನ್ನು ಈ ಕೆಳಗಿನಂತೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.<br><br>ಏಪ್ರಿಲ್ 2020 ತಿಂಗಳ ಕಂತು — ಜೂನ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು<br>ಮೇ 2020 ತಿಂಗಳ ಕಂತು — ಜುಲೈ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು<br>ಜೂನ್ 2020 ತಿಂಗಳ ಕಂತು — ಆಗಸ್ಟ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು |
| (ಆ) | ಈಗಾಗಲೇ ಸಣ್ಣ ಕೈಗಾರಿಕೆ ಉತ್ತೇಜಿಸಲು ಸರ್ಕಾರದಿಂದ ಬಿಡುಗಡೆ ಆಗಿರುವ ಯೋಜನೆ ಮತ್ತು ಅದರ ಅನುದಾನದ ಮೊತ್ತವೆಷ್ಟು; (ಮಾಹಿತಿ ನೀಡುವುದು) | 2020-21 ನೇ ಸಾಲಿನಲ್ಲಿ ಸಣ್ಣ ಕೈಗಾರಿಕೆ ಉತ್ತೇಜಿಸಲು ಸರ್ಕಾರದಿಂದ ಬಿಡುಗಡೆ ಆಗಿರುವ ಅನುದಾನದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ |
| (ಇ) | ಸಣ್ಣ ಕೈಗಾರಿಕೆ ಉದ್ಯಮಗಳಿಗೆ ಸಾಲ ಸೌಲಭ್ಯ ಇದೆಯೇ; | **ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನಯೋಜನೆಯಡಿ** ನಗರ ಮತ್ತುಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಗರಿಷ್ಠ ಸಾಲ ರೂ. 25 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲ ಒದಗಿಸಲಾಗುವುದು ಹಾಗೂ ಯೋಜನಾ ವೆಚ್ಚದ ಮೇಲೆ ಶೇ. 15 ರಿಂದ ಶೇ.35 ರವರೆಗೆಗರಿಷ್ಠ ರೂ.3.75 ಲಕ್ಷದಿಂದ ರೂ.8.75 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ<br><br>ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ಮೊದಲ ಪೀಳಿಗೆಯ ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ ಘಟಕಗಳಿಗೆ ಗರಿಷ್ಠ ರೂ.2.00 ಕೋಟಿ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ)ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿರಹಿತ ಗರಿಷ್ಠ ರೂ.33 ಲಕ್ಷ ಸಾಫ್ಟ್ ಸೀಡ್ ಕ್ಯಾಪಿಟಲ್ ಸಾಲವನ್ನು ನೀಡಲಾಗುತ್ತಿದೆ. |

| (ಈ) | ಇದ್ದಲ್ಲಿ, 2020-21ನೇ ಸಾಲಿನಲ್ಲಿ ಎಷ್ಟು ಮೊತ್ತದ ಸಾಲಗಳನ್ನು ಯಾವ ಯಾವ ಭಾಗಗಳಲ್ಲಿ ನೀಡಲಾಗಿದೆ? | 2020-21 ನೇ ಸಾಲಿನಲ್ಲಿ ನೀಡಲಾದ ಸಾಲದ ವಿವರಗಳು ಈ ಕೆಳಗಿನಂತಿವೆ:- |
|---|---|---|

ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನಯೋಜನೆ:

| | ಜಿಲ್ಲೆ | ಘಟಕ | ಬ್ಯಾಂಕುಗಳಿಂದ ನೀಡಲಾಗಿರುವ ಸಾಲ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಬಾಗಲಕೋಟೆ | 182 | 1,206.823 |
| 2 | ಬೆಂಗಳೂರು ನಗರ | 189 | 2,099.359 |
| 3 | ಬೆಂಗಳೂರು (ಗ್ರಾ) | 59 | 502.722 |
| 4 | ಬೆಳಗಾವಿ | 461 | 2,644.244 |
| 5 | ಬಳ್ಳಾರಿ | 234 | 1,358.525 |
| 6 | ಬೀದರ್ | 53 | 267.902 |
| 7 | ವಿಜಯಪುರ | 356 | 2,543.772 |
| 8 | ಚಾಮರಾಜನಗರ | 60 | 305.358 |
| 9 | ಚಿಕ್ಕಬಳ್ಳಾಪುರ | 97 | 767.800 |
| 10 | ಚಿಕ್ಕಮಗಳೂರು | 72 | 456.298 |
| 11 | ಚಿತ್ರದುರ್ಗ | 72 | 440.290 |
| 12 | ದಕ್ಷಿಣ ಕನ್ನಡ | 264 | 1,994.312 |
| 13 | ದಾವಣಗೆರೆ | 106 | 803.541 |
| 14 | ಧಾರವಾಡ | 112 | 514.129 |
| 15 | ಗದಗ | 77 | 392.723 |
| 16 | ಕಲಬುರಗಿ | 30 | 115.797 |
| 17 | ಹಾಸನ | 88 | 423.547 |
| 18 | ಹಾವೇರಿ | 151 | 832.873 |
| 19 | ಕೊಡಗು | 65 | 420.907 |
| 20 | ಕೋಲಾರ | 66 | 444.349 |
| 21 | ಕೊಪ್ಪಳ | 69 | 315.638 |

| | | | |
|---|---|---|---|
| 22 | ಮಂಡ್ಯ | 83 | 585.240 |
| 23 | ಮೈಸೂರು | 126 | 877.538 |
| 24 | ರಾಯಚೂರು | 47 | 213.839 |
| 25 | ರಾಮನಗರ | 77 | 476.195 |
| 26 | ಶಿವಮೊಗ್ಗ | 133 | 876.742 |
| 27 | ತುಮಕೂರು | 56 | 382.842 |
| 28 | ಉಡುಪಿ | 159 | 1,139.962 |
| 29 | ಕಾರವಾರ | 118 | 723.668 |
| 30 | ಯಾದಗಿರಿ | 60 | 209.515 |
| | ಒಟ್ಟು | **3722** | **24,336.453** |

**ಸಾಫ್ಟ್ ಸೀಡ್ ಕ್ಯಾಪಿಟಲ್ ಯೋಜನೆ:**

| | ವಿಶೇಷ ಘಟಕ ಯೋಜನೆ | | ಗಿರಿಜನ ಉಪ ಯೋಜನೆ | |
|---|---|---|---|---|
| ಜಿಲ್ಲೆ | ಭೌತಿಕ | ಆರ್ಥಿಕ ರೂ.ಲಕ್ಷಗಳಲ್ಲಿ | ಭೌತಿಕ | ಆರ್ಥಿಕ (ರೂ.ಲಕ್ಷಗಳಲ್ಲಿ) |
| ಬೆಂಗಳೂರು–ನಗರ | 3 | 23.77 | – | |
| ಧಾರವಾಡ | 1 | 7.00 | 1 | 5.50 |
| ವಿಜಯಪುರ | 2 | 19.00 | – | |
| ದಾವಣಗೆರೆ | 2 | 27.28 | – | |
| ಮೈಸೂರು | – | – | 1 | 6.42 |
| ಬೀದರ್ | 3 | 13.35 | 0 | |
| ಬಾಗಲಕೋಟೆ | 1 | 5.70 | 0 | |
| ಕೋಲಾರ | 2 | 93.75 | 1 | 18.75 |
| **ಒಟ್ಟು** | **14** | **189.85** | **3** | **30.67** |

ಸಿಐ 32 ಎಸ್ಎಸ್ಐ 2021

*(ಸಿ.ಸಿ ಪಾಟೀಲ್)*
ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು
ಸಾರ್ವಜನಿಕ ಸಂಪರ್ಕ ಸಚಿವರು

## ಅನುಬಂಧ-1

ಪ್ರಶ್ನೆ ಸಂ 808-ಶ್ರೀ ಎಂ.ನಾರಾಯಣಸ್ವಾಮಿ, ಮಾನ್ಯ ವಿಧಾನ ಪರಿಷತ್ ಸದಸ್ಯರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**2020-21 ನೇ ಸಾಲಿನ ಜನವರಿ ಅಂತ್ಯದವರೆಗೆ ಬಿಡುಗಡೆಯಾದ ಅನುದಾನ ಮತ್ತು ವೆಚ್ಚವಾದ ಅನುದಾನ**

| # | ಯೋಜನೆ / ಕಾರ್ಯಕ್ರಮ | ಜನವರಿ 2021 ರ ವರೆಗೆ ಬಿಡುಗಡೆಯಾಧ ಅನುದಾನ (ರೂ.ಲಕ್ಷಗಳಲ್ಲಿ) | ಜನವರಿ 2021 ರ ವರೆಗೆ ವೆಚ್ಚಮಾಡಲಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಎಂ ಎಸ್ ಇ ಸಿ ಡಿ ಪಿ - ಕ್ಲಸ್ಟರ್ ಅಭಿವೃದ್ಧಿ ಯೋಜನೆ | 154.00 | 154.00 |
| 2 | ಪರಿಶಿಷ್ಟ ಜಾತಿ ಉಪ ಯೋಜನೆ-ಎಂ ಎಸ್ ಇ ಸಿ ಡಿ ಪಿ - ಕ್ಲಸ್ಟರ್ ಅಭಿವೃದ್ಧಿ ಯೋಜನೆ | 60.75 | 60.75 |
| 3 | ಗಿರಿಜನ ಉಪ ಯೋಜನೆ-ಎಂ ಎಸ್ ಇ ಸಿ ಡಿ ಪಿ - ಕ್ಲಸ್ಟರ್ ಅಭಿವೃದ್ಧಿ ಯೋಜನೆ | 8.25 | 8.25 |
| 4 | ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ನೆರವು ಹಾಗೂ ಇತರೆ ವೆಚ್ಚಗಳು (ಕೆಎಸ್‌ಸಿಸಿಎಫ್‌ಎಲ್, ಕೆಎಸ್‌ಸಿಡಿಸಿ, ಕಿಲ್ಸ್, ಕೃಪುಡ್ಸ್, ಆಡಳಿತಾತ್ಮಕ ವೆಚ್ಚ ಮತ್ತು ತರಬೇತಿ ವಿಚಾರ ಸಂಕಿರಣ ವೆಚ್ಚ) | 350.00 | 316.64 |
| 5 | ಸಹಾಯ ಧನ-(ಕೈಗಾರಿಕಾ ನೀತಿಯಡಿ ಸಹಾಯ ಧನ ಮತ್ತು ಸಿಎಂಇಜಿಪಿ ಸಹಾಯ ಧನ) | 8553.00 | 8464.23 |
| 6 | ಪರಿಶಿಷ್ಟ ಜಾತಿ ಉಪ ಯೋಜನೆ-(ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ, ಪ್ರೊಸೆಸ್ಸಿಂಗ್ ಪೀಸ್, ವಿದ್ಯುಚ್ಛಕ್ತಿ ಸಹಾಯಧನ) | 694.50 | 694.50 |
| 7 | ಗಿರಿಜನ ಉಪ ಯೋಜನೆ-(ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ, ಪ್ರೊಸೆಸ್ಸಿಂಗ್ ಪೀಸ್, ವಿದ್ಯುಚ್ಛಕ್ತಿ ಸಹಾಯಧನ) | 127.50 | 127.50 |
| 8 | ಖಾದಿ ಮತ್ತು ಸಣ್ಣ ಕೈಗಾರಿಕೆ ಉತ್ಪನ್ನಗಳ ಮೇಲಿನ ರಿಯಾಯ್ತಿ (ಎಂಡಿಎ ಮತ್ತು ಪ್ರೋತ್ಸಾಹ ಮಜೂರಿ ಸಹಾಯಧನ) | 720.00 | 1440.00 |
| 9 | ತೆಂಗಿನ ನಾರಿನ ವಲಯಕ್ಕೆ ನೆರವು ತೆಂಗು ಭಾಗ್ಯ ( ಎಂಡಿಎ, ಅನುರೂಪ ಮಜೂರಿ ಮತ್ತು ಪ್ರೋತ್ಸಾಹ ಮಜೂರಿ ಸಹಾಯ ಧನ) | 390.00 | 287.00 |
| 10 | ಕರಕುಶಲ ಕಲೆಗೆ ಬೆಂಬಲ-ಕೆ ಎಸ್ ಎಚ್ ಡಿ ಸಿ - ತರಬೇತಿ, ರಿಯಾಯಿತಿ ಸಹಾಯ ಧನ | 75.00 | 216.00 |
| 11 | ಪರಿಶಿಷ್ಟ ಜಾತಿ ಉಪ ಯೋಜನೆ-ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ, ಪ್ರೊಸೆಸ್ಸಿಂಗ್ ಪೀಸ್, ವಿದ್ಯುಚ್ಛಕ್ತಿ ಸಹಾಯಧನ | 17.25 | 17.25 |
| 12 | ಗಿರಿಜನ ಉಪ ಯೋಜನೆ-ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ, ಪ್ರೊಸೆಸ್ಸಿಂಗ್ ಪೀಸ್, ವಿದ್ಯುಚ್ಛಕ್ತಿ ಸಹಾಯಧನ | 13.50 | 13.50 |
| 13 | ಪರಿಶಿಷ್ಟ ಜಾತಿ ಉಪ ಯೋಜನೆ-50/90% ಶೆಡ್/ನಿವೇಶನ ಸಹಾಯ ಧನ | 2969.25 | 2969.25 |
| 14 | ಗಿರಿಜನ ಉಪ ಯೋಜನೆ-50/90% ಶೆಡ್/ನಿವೇಶನ ಸಹಾಯ ಧನ | 780.75 | 780.75 |
| 15 | ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಕೈಗಾರಿಕಾ ಮೂಲಭೂತ ಸೌಕರ್ಯಗಳು (ಮೂಲ ಸೌಕರ್ಯ ಅಭಿವೃದ್ಧಿಗೆ ಬಾಕಿ ಇರುವ ಅನುದಾನ ಬಿಡುಗಡೆ) | 952.00 | 0.00 |
| 16 | ವಿಶಿಷ್ಟ ತಾಂತ್ರಿಕ ತರಬೇತಿ ಸಂಸ್ಥೆಗಳು - ಬಂಡವಾಳ ವೆಚ್ಚ (ಕಿಲ್ಸ್, ಸಿಟಿಐ ಮತ್ತು ಅವೇಕ್ ಮುಂದುವರೆದ ಕಾಮಗಾರಿಗಳಿಗೆ ವೆಚ್ಚ) | 50.00 | 31.00 |
| 17 | ಜಿ.ಕೈ.ಕೇಂ/ಜಂ.ನಿರ ವಸತಿ ಗೃಹಗಳ ನಿರ್ಮಾಣ - ಕಟ್ಟಡಗಳು | 38.00 | 38.00 |
| | **ಒಟ್ಟು** | **15953.75** | **15618.62** |